ದಿನಾಂಕಃ 12.04.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ **1, 2, 4, 6** ರಿಂದ **9** ನೇ ಪ್ರತಿವಾದಿಗಳ ಪರ ವಕೀಲರಿಂದಃ

5. 2011 ರಲ್ಲಿ 14 ಲಕ್ಷ ಹಣ ಕೊಟ್ಟಿದೇನೆ. ಅದನು ಕಬ್ಬಿನ ಬಿಲ್ ಹಣದಿಂದ ಹಾಗೂ ನನ್ನ ಮಾವನವರ ಕಡೆಯಿಂದ ತೆಗೆದುಕೊಟ್ಟಿದ್ದೇನೆ. ಅದನ್ನು ತೋರಿಸಲು ದಾಖಲೆ ಇದೆ, ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. 2014 ರಲ್ಲಿ 5 ಲಕ್ಷ 50 ಸಾವಿರ ಹಣ ಕೊಟ್ಟಿದ್ದೇನೆ. ಅದನ್ನು ಕಬ್ಬಿನ ಬಿಲ್ ಮತ್ತು ಗೋವಿನ ಜೋಳ ಮಾರಿದ ಹಣದಿಂದ ಕೊಟ್ಟಿದ್ದೇನೆ. ಸದರಿ ಬಿಲ್‌ಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. 2016 ರಲ್ಲಿ ನೀವು ಪ್ರತಿವಾದಿಗೆ ಎಷ್ಟು ಹಣ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ಆಗ ಅವರೆ ನನಗೆ 9 ಲಕ್ಷ 50 ಸಾವಿರ ಹಣ ಕೊಟ್ಟಿದ್ದಾರೆ ಎನ್ನುತ್ತಾರೆ. ಆಗ ನನ್ನ ಮತ್ತು ವರ ನಡುವಿನ ವ್ಯವಹಾರ ಮುಗಿಯಿತು ಎಂದರೆ ಸರಿಯಲ್ಲ. 10 ಲಕ್ಷ 50 ಸಾವಿರಕ್ಕೆ ಮತ್ತೆ 3 ಎಕರೆ ಜಮೀನನ್ನು ಬರೆದುಕೊಟ್ಟರು. ನಾನು ಪ್ರತಿವಾದಿಗೆ ಒಟ್ಟು 19 ಲಕ್ಷ 50 ಸಾವಿರ ಹಣ ಕೊಟ್ಟಿದ್ದೇನೆ.

6. 2014 ರಲ್ಲಿ ಮಾಡಿಕೊಂಡ ಕರಾರುಪತ್ರದಲ್ಲಿ ರೇಣುಕಾರರವರು ಭಾವಚಿತ್ರ ವಿಲ್ಲ ಎಂದರೆ ಸಾಕ್ಷಿ ಅದು ಮಿಸ್ ಆಗಿ ಹೋಗಿದೆ ಎಂದು ನುಡಿದು ನಂತರ ರೇಣುಕಾ ಮತ್ತು ಸಿದ್ದಪ್ಪರವರ ಇಬ್ಬರು ಬಂದು ಬಾಂಡ್ ಬರೆದುಕೊಟ್ಟಿದ್ದಾರೆ ಎನ್ನುತ್ತಾರೆ. 2011 ರಲ್ಲಿ ಸಿದ್ದಪ್ಪ ನನ್ನ ಬಳಿ 2 ಲಕ್ಷ ಕೈಗಡ ಸಾಲ ಎಂದು ತೆಗೆದುಕೊಂಡಿದ್ದು, ಅದಕ್ಕೆ ಭದ್ರತೆಯ ಪತ್ರ ಎಂದು ಬರೆಸಿಕೊಳ್ಳುತ್ತೇನೆ ಎಂದು ಹೇಳಿ ಖರೀದಿ ಕರಾರುಪತ್ರವನ್ನು ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಬಡ್ಡಿ ನನಗೆ ಕೊಡಲಿಲ್ಲ ಎಂದು ಮತ್ತೆ ಹೋಗಿ ನಾನು ಮತ್ತೊಂದು ಕರಾರುಪತ್ರವನ್ನು ತಯಾರು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಜಮೀನನ್ನು ನಾನು ಹೊಡೆದುಕೊಳ್ಳಬೇಕೆಂದು

ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3 ನೇ ಪ್ರತಿವಾದಿಯ ಪರ ವಕೀಲರು ಸಮಯ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಕೆ ಎಮ್ ಶಂಕರ್)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ